ಸೈಟುಗಳನ್ನು ಕೊಡುತ್ತೇವೆ, ಮನೆ ನಿವೇಶನಗಳನ್ನು ಕೊಡುತ್ತೇವೆ ಎಂದರೆ ಸುತ್ತಮುತ್ತ ಇರತಕ್ಕಂಥ ತಮಿಳುನಾಡಿನವರು, ಕೇರಳದವರು ಬಂದು ಠಾಣೆ ಹಾಕುವುದಕ್ಕೆ ಅವಕಾಶವಾಗುತ್ತದೆ. ವಿಶೇಷವಾಗಿ ಬರುತ್ತಿದ್ದಾರೆ. ಚಾಮರಾಜನಗರ ತಾಲ್ಲೂಕಿನಲ್ಲಿ ಅವರೇ ಮಾಲೀಕರಾಗಿದ್ದಾರೆ. ನಾನು ಮೊನ್ನೆ ಹೋಗಿ ನೋಡಿದೆ. ಮೊದಲು ಕನ್ನಡದ ಜನರು ಯಾರಿದ್ದಾರೆ ಅಂತಹವರ ಸಮಸ್ಯೆ ಬಗೆಹರಿಸಿಕೊಂಡು, ಮುಂದೆ ಉಳಿದಿರತಕ್ಕಂಥ ಜನಗಳಿಗೆ ಕೊಡುವ ಬಗ್ಗೆ ವಿಚಾರ ಮಾಡಬಹುದು. ಇನ್ನು ಪ್ರೈವೇಟ್ ಜಮೀನುಗಳನ್ನೇ ನಾವು ಅಕ್ವೈರ್ ಮಾಡಬೇಕು, ಅಕ್ವಿಷನ್ ಕಾನೂನು ಪ್ರಕಾರ ಹೋಗಬೇಕಾಗುತ್ತದೆ. ಇದು ಹೈಕೋರ್ಟ್‌ನಲ್ಲಿ ಸ್ಟೇ ಆಗಿದೆ. ಕೋರ್ಟ್ ಮುಖಾಂತರ ಇದು ತಡವಾಗಿದೆ. ಸಾಮಾಜಿಕ ನ್ಯಾಯ ಒದಗಿಸಿಕೊಡಬೇಕೆಂದು ನಾವು ಈ ಸದನದಲ್ಲಿ ಹೇಳುತ್ತೇವೆ. ಸಾಮಾಜಿಕ ನ್ಯಾಯ ಒದಗಿಸುವುದನ್ನು ತಡಮಾಡುವುದಕ್ಕೆ ಹೈಕೋರ್ಟ್‌ನವರು ಸ್ಟೇ ಆರ್ಡರ್ ಕೊಡುತ್ತಿದ್ದಾರೆ. ಅವರು ಸ್ಟೇ ಆರ್ಡರ್ ಕೊಡಲಿ, ನನ್ನ ಅಭ್ಯಂತರ ಇಲ್ಲ. ಆದರೆ ಒಂದರೆಡು ತಿಂಗಳು ಮೂರು ತಿಂಗಳುಗಳ ಒಳಗೇ ವಿಶೇಷವಾಗಿ ಕೇಳಿ ಪರಿಹಾರ ಮಾಡತಕ್ಕದ್ದು ಬಹಳ ಸೂಕ್ತ ಎಂದು ನನ್ನ ಅಭಿಪ್ರಾಯ.

ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ಪಡಿತರ ಚೀಟಿಗಳ ವಿತರಣೆ

562: ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ಪಡಿತರ ಪದ್ಧತಿ ಇರುವ ಪಟ್ಟಣಗಳಲ್ಲಿ ಕಾರ್ಡ್ ಮೂಲಕ ಹಂಚುತ್ತಿರುವ ಸಕ್ಕರೆ, ಅಕ್ಕಿ, ಗೋಧಿ ಮತ್ತು ಎಣ್ಣೆ ಪ್ರಮಾಣಗಳಲ್ಲಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

2) *ವಿತರಣೆ ಸರಿಯಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

3) *ಪಡಿತರ ಆಹಾರ ಪದಾರ್ಥಗಳ ಪ್ರಮಾಣವನ್ನು ಹೆಚ್ಚಿಸಿ ವಿತರಣೆಯನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?*

4) *ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಆಹಾರ ವಿತರಣೆ ಸಂಪೂರ್ಣ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

5) *ಸೀಮೆಎಣ್ಣೆ ಮತ್ತು ಡೀಸಲ್ ವಿತರಣೆ ಸರಿಯಾಗಿ ಆಗದೇ ಇರಲು ಕಾರಣಗಳೇನು?*

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

1) ಸಕ್ಕರೆ, ಅಕ್ಕಿ, ಗೋಧಿ ಪ್ರಮಾಣದಲ್ಲಿ ಕಡಿತ ಆಗಿರುವುದಿಲ್ಲ, ಆದರೆ ಕೇಂದ್ರ ಸರ್ಕಾರವು ತಾಳೆಎಣ್ಣೆಯನ್ನು ಮಾತ್ರ ನವೆಂಬರ್ 1990 ರಿಂದ ಜನವರಿ 1991ರವರೆಗೆ ಬಿಡುಗಡೆ ಮಾಡಿರುವುದಿಲ್ಲ,

2) ಬಂದಿದೆ (ಕೆಲವೆಡೆ ಮಾತ್ರ)

3) ಪಡಿತರ ಆಹಾರಪದಾರ್ಥಗಳ ಪ್ರಮಾಣವನ್ನು ಹೆಚ್ಚಿಸಿ ವಿತರಣೆಯನ್ನು ಸರಿಪಡಿಸಲು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡ ಪ್ರಮಾಣದಲ್ಲಿ ಆಹಾರ ಪದಾರ್ಥಗಳನ್ನು ಪ್ರತಿ ತಿಂಗಳು ನಿಗಧಿತವಾಗಿ ಸರಬರಾಜು ಮಾಡಲು ಕೋರಲಾಗಿದೆ.

1) ಅಕ್ಕಿ - 75,000 ಮೆ.ಟನ್.
2) ಗೋಧಿ - 50,000 ಮೆ.ಟನ್.
3) ಸಕ್ಕರೆ - 25,000 ಮೆ.ಟನ್.
4) ಸೀಮೆ ಎಣ್ಣೆ - 67,000 ಕೆ.ಎಲ್.

5) ತಾಳೆ ಎಣ್ಣೆ - 11,000 ಎಂ.ಲೀ

4) ಹಾಗೇನಿಲ್ಲ.

5) ಈಗ ರಾಜ್ಯಕ್ಕೆ ನವೆಂಬರ್ 90 ರ ಮಾಹೆಯಿಂದ ತಿಂಗಳಿಗೆ 52,000 ಕೆ.ಎಲ್ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲಾಗುತ್ತಿದೆ. ಇದನ್ನು ಜಿಲ್ಲೆಗಳಿಗೆ ಗಣನೀಯ ಪ್ರಮಾಣದಲ್ಲಿ ಮರು ಹಂಚಿಕೆ ಮಾಡಲಾಗುತ್ತಿದೆ. ಈಗ ಸೀಮೆಎಣ್ಣೆಯ ಕೊರತೆ ಅಷ್ಟೊಂದು ಇರುವುದಿಲ್ಲ. ರಾಜ್ಯದ ಬೇಡಿಕೆಯು ತಿಂಗಳಿಗೆ 67,000 ಕೆ.ಎಲ್. ಆಗಿರುತ್ತದೆ. ಹೇಳುವುದಾದರೆ ಡೀಸಲ್ ಬಗ್ಗೆ ರಾಜ್ಯಕ್ಕೆ ತಿಂಗಳಿಗೆ 99,000 ಮೆ.ಟನ್ ಬೇಡಿಕೆ ಇದ್ದು ಹೋದ ವರ್ಷ ಬಿಡುಗಡೆಯಾದ ಪ್ರಮಾಣವನ್ನೇ ಈ ವರ್ಷ ಬಿಡುಗಡೆ ಮಾಡುತ್ತಿರುತ್ತಾರೆ. ಹಾಗಾಗಿ ಡೀಸಲ್ ಬಗ್ಗೆ ಸ್ವಲ್ಪ ಮಟ್ಟಿಗೆ ಅಭಾವ ತಲೆದೋರಿದೆ. ಅವಶ್ಯಕ ಪ್ರಮಾಣದ ಡೀಸಲನ್ನು ಬಿಡುಗಡೆ ಮಾಡಲು ರಾಜ್ಯ ಸರ್ಕಾರವು ಕೇಂದ್ರವನ್ನು ಕೋರಿದೆ.

11.40 ಎ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ಸತ್ಯಕ್ಕೆ ಬಹಳ ದೂರವಾಗಿರತಕ್ಕಂಥ ವಿಚಾರವನ್ನು ಇಲ್ಲಿ ಹೇಳಿ ಅವರು ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟು ಅನೇಕ ವಿಚಾರಗಳನ್ನು ಹೇಳಿ, ಡೆಲ್ಲಿಯಲ್ಲಿ ಕೇಂದ್ರ ಸರ್ಕಾರದ ಜೊತೆ ನಾನು ಮಾತನಾಡಿದ್ದೇನೆ, ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳು ನಮಗೆ ಅಕ್ಕಿ ಪಾಮೋಲಿನ್ ಎಣ್ಣೆ ಇತ್ಯಾದಿಗಳನ್ನು ಜನವರಿ ತಿಂಗಳಲ್ಲಿ ಕೊಡುತ್ತಾರೆ. ಆಗ ನಾವು ಹೆಚ್ಚು ಹೆಚ್ಚು ಆಹಾರಪದಾರ್ಥಗಳನ್ನು ವಿತರಣೆ ಮಾಡುತ್ತೇವೆಂದು ಹೇಳಿದರು. ಅದಾದನಂತರ ಅವರು ಏನು ಹೇಳಿದ್ದಾರೆಂದರೆ ನಮಗೆ ಡೀಸಲ್ ಮತ್ತು ಕೆರೋಸಿನ್ ಅಭಾವವೇ ಈ ರಾಜ್ಯದಲ್ಲಿ ಇಲ್ಲವೇನೋ ಎನ್ನುವ ಭಾವನೆ ಬರುವ ರೀತಿಯಲ್ಲಿ ಅವರ ಉತ್ತರದಲ್ಲಿ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಇಡೀ ಜನ ಈ ರಾಜ್ಯದಲ್ಲಿ ಸರ್ಕಾರ ಇದೆಯೇ ಎನ್ನತಕ್ಕಂಥಾದ್ದನ್ನು ಪ್ರಶ್ನೆ ಮಾಡುತ್ತಿದ್ದಾರೆ. ಡೀಸಲ್ ಮತ್ತು ಕೆರೋಸಿನ್ ವಿತರಣೆ ಮತ್ತು ಪಾಮೋಲಿನ್ ಎಣ್ಣೆ ವಿತರಣೆ ಮಾಡತಕ್ಕಂಥ ವಿಚಾರದಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇದಕ್ಕೆ ನಾನು ತೀರ್ವತರವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಈ ಉತ್ತರದ ಪ್ರತಿಯನ್ನು ಹರಿದು ಹಾಕುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಉತ್ತರದ ಪ್ರತಿಯನ್ನು ಹರಿದುಹಾಕಿದರು.)

ರಾಜ್ಯದಲ್ಲಿ ಸೀಮೆಎಣ್ಣೆ ಮತ್ತು ಡೀಸಲ್ ಕಳ್ಳತನದಲ್ಲಿ ಮಾರಾಟವಾಗುತ್ತಿದೆ. ಒಂದು ಲೀಟರ್ ಡೀಸಲ್ ತರಬೇಕಾದರೆ 9 ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಪರಿಸ್ಥಿತಿ ಇರುವಾಗ ತಾವು ಮೀನುಗಾರರಿಗೆ ಮತ್ತು ರೈತರಿಗೆ ಪರ್ಮಿಟ್‌ಗಳನ್ನು ಕೊಡುತ್ತೇನೆಂದು ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿಸಿಕೊಂಡಿರಿ. ಆದರೆ ಇವತ್ತು ರೈತರಿಗೆ, ಡೀಸಲ್ ಸಿಗುತ್ತಿಲ್ಲ. ಮತ್ತೆ ಬೆಂಗಳೂರು ನಗರದಲ್ಲಿ ನಾಗರೀಕರಿಗೆ ಅಕ್ಕಿ ಮತ್ತು ಪಾಮೋಲಿನ್ ಎಣ್ಣೆ ಸಕ್ಕರೆ ಇತ್ಯಾದಿಗಳನ್ನು ಸಮರ್ಪಕವಾಗಿ ಹಂಚುತ್ತೇವೆಂದು ಹೇಳಿದಿರಿ. ಕಳೆದ ಒಂದು ತಿಂಗಳಿಂದ ಬೆಂಗಳೂರು ನಗರದಲ್ಲಿ ಯಾರಿಗೂ ಸಕ್ಕರೆ, ಪಾಮೋಲೀನ್ ಎಣ್ಣೆ ಇತರೆ ಆಹಾರಪದಾರ್ಥಗಳು ವಿತರಣೆ ಮಾಡದೇ ಇರಲು ಕಾರಣವೇನು? ನಾನು ಇವತ್ತು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಕೇಂದ್ರ ಸರ್ಕಾರ ಇದೆಯೇ? ಸರ್ಕಾರ ಆಶ್ವಾಸನೆ ಕೊಡುತ್ತದೆ. ಆ ಆಶ್ವಾಸನೆಯನ್ನು ತೆಗೆದುಕೊಂಡು ನಾವೇನು ಮಣ್ಣು ತಿನ್ನಬೇಕು? ತಾವು ಕೊಟ್ಟ ಆಶ್ವಾಸನೆ ಏನಾಯಿತು ಎನ್ನುವುದನ್ನು ಮಾನ್ಯ ಮಂತ್ರಿಗಳು ಹೇಳಬೇಕು?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೇ .....

ಶ್ರೀ ಎಂ. ವೀರಪ್ಪಮೊಯಿಲಿ : ಅವರು ಉತ್ತರದ ಪ್ರತಿಯನ್ನು ಹರಿದು ಹಾಕಿದ್ದಾರೆ. ಆದ್ದರಿಂದ ಇದಕ್ಕೆ ಸರ್ಕಾರ ಉತ್ತರ ಏತಕ್ಕೆ ಕೊಡಬೇಕು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ನಾನು ಉಪ-ಪ್ರಶ್ನೆ ಕೇಳಿದ್ದೇನೆ. ನಾನು ಅವರ ಉತ್ತರಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದ್ದೇನೆ. ನಾನು ಪ್ರತಿಭಟನೆ ಮಾಡಬಾರದೇನು? ಮಾನ್ಯ ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು ....

ಅಧ್ಯಕ್ಷರು : ಬರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಈ ಬಗ್ಗೆ ಪ್ರತಿಭಟನೆ ಮಾಡಬೇಕಾಗಿತ್ತು. ಮಾಡಿದ್ದೇನೆ. ಅದಕ್ಕೆ ಉತ್ತರ ಕೊಡಿಸುವುದು ಬಿಡುವುದು ತಮಗೆ ಬಿಟ್ಟಿದ್ದು. ಹಾಗಾದರೆ ನಾನು ಪ್ರತಿಭಟನೆ ಮಾಡಬಾರದೇನು? ಇಲ್ಲಿ ರಾಜ್ಯಪಾಲರ ಭಾಷಣವನ್ನೇ ಹರಿದು ಬಿಸಾಕಿದ್ದಾರೆ. ಮಾನ್ಯ ಅಧ್ಯಕ್ಷರೇ ತಾವು ಈ ಉತ್ತರವನ್ನು ಗಮನಿಸಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಅವರು ಈ ರೀತಿ ಪ್ರತಿಭಟನೆ ವ್ಯಕ್ತಪಡಿಸಬೇಕಾದರೆ ಎಷ್ಟು ಗಂಭೀರವಾಗಿ ಅನ್ಯಾಯ ನಡೆದಿದೆ ಎನ್ನತಕ್ಕಂಥಾದ್ದಕ್ಕೆ, ಅವರ ಪ್ರತಿಭಟನೆ. ಅದಕ್ಕೆ ಸರ್ಕಾರ ಉತ್ತರ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ? ಎರಡನೇ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದಾರೆ ಎಂದು ಅವರು ಕೊಟ್ಟಿರತಕ್ಕಂಥ ಉತ್ತರಗಳನ್ನು ತಾವೇ ತೆಗೆದುಕೊಂಡು ನೋಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಸಮರ್ಪಕವಾದ ಉತ್ತರ ಕೊಡದಿದ್ದಾಗ ಪ್ರತಿಭಟನೆ ಮಾಡಲೇಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಎಣ್ಣೆ ಕೊಡುತ್ತೇವೆ. ಆಹಾರಪದಾರ್ಥಗಳಾದ ಅಕ್ಕಿ, ಗೋಧಿ ಇತ್ಯಾದಿ ಕೊಡುತ್ತೇವೆಂದು ಈಗ ಪತ್ರಿಕೆಗಳಲ್ಲಿ ಬಂದಿದೆ. ಎಲ್ಲಿ ಕೊಟ್ಟಿದ್ದಾರೆ? ಅನ್ಯಾಯ ನಡೆದಾಗ ಪ್ರತಿಭಟನೆ ಮಾಡಬಾರದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಸಿಂಧ್ಯರವರು ಕಳುಹಿಸಿದ್ದ ಪ್ರಶ್ನೆಗೆ ನಾನು ಲಿಖಿತ ಮೂಲಕ ಉತ್ತರ ಕೊಟ್ಟಿದ್ದೇನೆ. ಅವರು ಉಪಪ್ರಶ್ನೆಗಳನ್ನು ಕೇಳುವಂತಹ ಹಂತದಲ್ಲಿ ಅವರ ಮುಖ್ಯ ಪ್ರಶ್ನೆಗೆ ಕೊಟ್ಟ ಉತ್ತರದ ಪ್ರತಿಯನ್ನು ಹರಿದುಹಾಕಿದರು. ಅವರು ತಿಳಿದುಕೊಳ್ಳಬೇಕು. ಉದ್ವೇಗಕ್ಕೆ ಒಳಗಾಗಲು ಸಹ ಒಂದು ಇತಿಮಿತಿ ಇರಬೇಕು. ಅಷ್ಟೊಂದು ಉದ್ವೇಗಗೊಂಡರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಇತಿಮಿತಿಯನ್ನು ನಾನು ತಮ್ಮಿಂದ ಹೇಳಿಸಿಕೊಂಡು ಕಲಿತುಕೊಳ್ಳಬೇಕಾಗಿಲ್ಲ. ನೀವು ಕೊಟ್ಟಿರತಕ್ಕಂಥ ಉತ್ತರದಲ್ಲಿ ಏನಿದೆ?

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಸರ್ಕಾರದ ಪರವಾಗಿ ಜವಾಬ್ದಾರಿಯಿಂದ ಉತ್ತರ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. ಸರ್ಕಾರ ಆಹಾರ ಪದಾರ್ಥಗಳ ವಿತರಣೆಯಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು. ಇದು ಸತ್ಯಕ್ಕೆ ಬಹಳ ದೂರವಾದಂತಹ ಆಪಾದನೆ.

ಶ್ರೀ ವಾಟಾಳ್ ನಾಗರಾಜ್ : ಸತ್ಯಕ್ಕೆ ಸ್ವಲ್ಪ ಹತ್ತಿರ ಇರಬಹುದೋ? ಇವತ್ತು ರಾಜ್ಯದ ಜನತೆಗೆ ಸೀಮೆ ಎಣ್ಣೆ ಸಿಗುತ್ತಿಲ್ಲ, ಪಾಮೋಲಿನ್ ಎಣ್ಣೆ ಸಿಗುತ್ತಿಲ್ಲ, ಸಕ್ಕರೆ, ಅಕ್ಕಿ ಸಿಗುತ್ತಿಲ್ಲ, ಡೀಸಲ್ ಸಿಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ರಾಜ್ಯದ ಸ್ಥಿತಿ ಏನಾಗಿದೆ? ಈ ಪರಿಸ್ಥಿತಿಯಲ್ಲಿ ಸದನ ನಡೆಯುವುದು ಅರ್ಥವಿಲ್ಲದಂತಾಗಿದೆ. ಜನ ಕಷ್ಟ ಪರಿಸ್ಥಿತಿಯಲ್ಲಿ ಸಿಕ್ಕಿಗೊಂಡು ನರಳುತ್ತಿದ್ದಾರೆ. ಸೀಮೆ ಎಣ್ಣೆ ಸಿಗುವುದಿಲ್ಲ, ಡೀಸಲ್ ಸಿಗುವುದಿಲ್ಲ,ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ ಸಿಗುವುದಿಲ್ಲ.

ಶ್ರೀ ಟಿ.ಎನ್. ನರಸಿಂಹಮೂರ್ತಿ : ಸ್ವಾಮಿ ನಾನು ಆಹಾರ ಖಾತೆ ಇಲಾಖೆಯ ಮಂತ್ರಿಯಾದದ್ದು 1990 ನವೆಂಬರ್ 17ನೇ ತಾರೀಖು. ತಮ್ಮ ಮುಖೇನ ಸದಸ್ಯರಿಗೆ ತಿಳಿಸುವುದೇನೆಂದರೆ, ಈ ಮೊದಲು ನಮ್ಮ ರಾಜ್ಯಕ್ಕೆ 45 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬರುತ್ತಿತ್ತು. ಈಗ ಮಾರ್ಚಿ ತಿಂಗಳಿನಿಂದ 48 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬರುತ್ತಿದೆ. ಅಂದರೆ 3 ಸಾವಿರ ಮೆಟ್ರಿಕ್ ಟನ್ ಅಕ್ಕಿ ಜಾಸ್ತಿಯಾಗಿದೆ. ಮತ್ತೊಂದು ಮಾನ್ಯ ಸದಸ್ಯರು ಹೇಳಿದರು. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಮಂತ್ರಿಯಾದಂಥ ಸಂದರ್ಭದಲ್ಲಿ ನಮ್ಮ ರಾಜ್ಯಕ್ಕೆ 30 ಸಾವಿರ ಮೆಟ್ರಿಕ್ ಟನ್ ಗೋಧಿ ಬರುತ್ತಿತ್ತು. ಜನವರಿ ತಿಂಗಳಿನಲ್ಲಿ 40 ಸಾವಿರ ಮೆಟ್ರಿಕ್ ಟನ್ ಗೋಧಿ, ಫೆಬ್ರವರಿ ತಿಂಗಳಿನಲ್ಲಿ 40 ಸಾವಿರ ಮೆಟ್ರಿಕ್ ಟನ್ ಗೋಧಿ ಮಾರ್ಚ್ ತಿಂಗಳಿನಲ್ಲಿ 45 ಸಾವಿರ ಮೆಟ್ರಿಕ್ ಟನ್ ಗೋಧಿ ಬಂದಿದೆ. ಅಂದರೆ ನಮಗೆ ಕೊಡುವ ಪ್ರಮಾಣವನ್ನು ಜಾಸ್ತಿಯಾಗಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಬಹುಶಃ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಇದು ನಮ್ಮ ಸಾಧನೆಯಾಗಿದೆ. ರಾಜ್ಯ ಸರ್ಕಾರಕ್ಕೆ ಹೆಚ್ಚು ಆಹಾರವನ್ನು ತರಲಾಗಿದೆಯೆಂದು ಅಧಿಕೃತವಾಗಿ ತಮಗೆ ಈ ಮಾತನ್ನು ಹೇಳುತ್ತೇನೆ. ಇದರಲ್ಲಿ ಏನಾದರೂ ನಾನು ಹೇಳಿರುವುದು ಸುಳ್ಳಾದರೆ ಈ ಸ್ಥಾನದಲ್ಲಿ ಒಂದು ಘಳಿಗೆ ಇರುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಣ್ಣೆ ಸಿಗುವ ಹಾಗಿಲ್ಲ, ಆಹಾರ ಸಿಗುವ ಹಾಗಿಲ್ಲ, ಅಕ್ಕಿ ಸಿಗುವ ಹಾಗಿಲ್ಲ, ಇದು ಇವರ ಸಾಧನೆ; ಸರ್ಕಾರದ ಸಾಧನೆಯೆಂದರೆ, ಅಕ್ಕಿ ಇಲ್ಲ, ಎಣ್ಣೆ ಇಲ್ಲ, ರಾಗಿ ಇಲ್ಲ, ಏನೂ ಇಲ್ಲ, ಇದು ಇವರ ಸರ್ಕಾರದ ಸಾಧನೆ. ಪೆಟ್ರೋಲ್ ಬಂಕ್ ನೋಡಿಕೊಂಡು ಬನ್ನಿ. ಅನ್ಯಾಯ ಇದು. ನಿಮ್ಮ ಸರ್ಕಾರ ಬಂದಮೇಲೆ ಆಹಾರದ ಕೊರತೆ, ಎಣ್ಣೆ ಕೊರತೆ, ನೀರಿನ ಕೊರತೆ, ಎಲ್ಲಾ ಕೊರತೆಯೂ ಉದ್ಭವವಾಗಿದೆ.

ಅಧ್ಯಕ್ಷರು : ನಾನು ಈ ಸಭೆ ನಡೆಸಬೇಕಾದರೆ ಎಲ್ಲಾ ಸದಸ್ಯರ ಸಹಕಾರವನ್ನು ಕೇಳಿದ್ದೇನೆ. ಮಂತ್ರಿಗಳು, ಪ್ರಚೋದನೆ ಏನೇ ಇರಲಿ, ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಏಕಾಏಕಿ ಹತ್ತಾರು ಮಾನ್ಯ ಸದಸ್ಯರುಗಳು ನಿಂತು ಅವರ ಮೇಲೆ ದಾಳಿ ಮಾಡಿದರೆ ಅವರಿಗೆ ನಾನು ರಕ್ಷಣೆ ಒದಗಿಸಿಕೊಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು, ಒಬ್ಬೊಬ್ಬರಿಗೂ ನಾನು ಅವಕಾಶ ಕೊಡುತ್ತಿದ್ದೇನೆ. ಯಾರಿಗೂ ಇಲ್ಲವೆಂದು ಹೇಳಿಲ್ಲ, ನಾಲ್ಕಾರು ಜನ ಮಾನ್ಯ ಸದಸ್ಯರು ಒಟ್ಟಾರೆ ಕೂಗಿದರೆ ಅವರು ಯಾರಿಗೆ ಉತ್ತರ ಕೊಡುತ್ತಾರೆ? ಸದನದಲ್ಲಿ ವರದಿಗಳನ್ನು ಬರೆದುಕೊಳ್ಳತಕ್ಕಂತಾದ್ದಾದರೂ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರ ಪಾಲಿಗೆ ಸರ್ಕಾರ ಸತ್ತಿದೆ. ಅವರು ಹೇಳುತ್ತಿರುವುದೇ ಬೇರೆ. ವಾಸ್ತವಾಂಶ ಸ್ಥಿತಿ ಏನು? ಗೋಧಿ ಜಾಸ್ತಿ ಬಂತು ಎಂದು ಹೇಳುತ್ತಿದ್ದಾರೆ; ಗೋಧಿ ಸಿಕ್ಕುತ್ತಿಲ್ಲ, ಡೀಸಲ್ ಅಭಾವ ಇಲ್ಲವೆಂದು ಹೇಳುತ್ತಿದ್ದಾರೆ. ಡೀಸಲ್ ಸಿಕ್ಕುವುದಿಲ್ಲ, ಅವರು ಹೇಳುವುದಕ್ಕೆ ಅರ್ಥವಿಲ್ಲ, ಎಲ್ಲಿದೆ ಸರ್ಕಾರ ಜನರ ಪಾಲಿಗೆ? ತಾವು ಏನಾದರೂ ವಿರೋಧಪಕ್ಷದಲ್ಲಿ ಇದ್ದಿದ್ದರೆ ಸದನದ ಕಾರ್ಯಕಲಾಪ ನಡೆಯುವುದಕ್ಕೆ ಬಿಡುತ್ತಿರಲಿಲ್ಲ, ಆ ರೀತಿ ಜನ ಕಣ್ಣೀರು ಹಾಕುತ್ತಿದ್ದಾರೆ. ಜನರ ಸಮಸ್ಯೆ ಬಗ್ಗೆ ಯಾವುದೇ ಕಳಕಳಿ ಇಲ್ಲದೆ ಬೇಜವಾಬ್ದಾರಿ ಸರ್ಕಾರ ಅಧಿಕಾರ ನಡೆಸುತ್ತಿದೆ. ಈ ಪರಿಸ್ಥಿತಿಯಲ್ಲಿ ನಾವು ಹೇಗೆ ಸ್ವಾಮಿ ಕೆಲಸ ಮಾಡುವುದು?

ಅಧ್ಯಕ್ಷರು : ಏನು ಮಾಡೋಣವೆಂದು ಹೇಳುತ್ತೀರಿ? ಸರ್ಕಾರವನ್ನು ತೆಗೆದುಹಾಕಿಬಿಡ್ಲಾ? ರಾಜೀನಾಮೆ ಕೊಟ್ಟುಬಿಡಿ ಎಂದು ಹೇಳಲೇ? ಮಾನ್ಯ ಯಡಿಯೂರಪ್ಪನವರೇ ನೀವು ವಿರೋಧ ಪಕ್ಷದ ಮುಖಂಡರಾಗಿ ಸರ್ಕಾರ ಸತ್ತಿದೆ, ನೀವು ಸರ್ಕಾರ ಸತ್ತಿದೆ ಎಂದು ಹೇಳಿ - ಅವರು ವಿರೋಧ ಪಕ್ಷ ಸತ್ತಿದೆ ಎಂದು ಹೇಳಿಕೊಂಡು ಹೋದರೆ ಸದನ ನಡೆಸತಕ್ಕಂಥಾದ್ದರೂ ಹೇಗೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ತಾಳೆ ಎಣ್ಣೆ ಬಗ್ಗೆ ಹೇಳುವುದಾದರೆ, ಇದು ಮಲೇಷಿಯಾ ದೇಶದಿಂದ ಬರುತ್ತದೆ. ಬಹಳ ತಿಂಗಳುಗಳಿಂದ ಭಾರತ ಸರ್ಕಾರಕ್ಕೆ ಬಂದಿರಲಿಲ್ಲ, ನವೆಂಬರ್ ತಿಂಗಳಿನಿಂದ ನಮ್ಮ ಅಲಾಟ್‌ಮೆಂಟ್ ಬಂದಿಲ್ಲ ಎನ್ನತಕ್ಕ ಮಾತನ್ನು ಆಗಿಂದಾಗ್ಗೆ ಹೇಳಲಾಗಿದೆ. ಈ ಫೆಬ್ರವರಿ ತಿಂಗಳಿನಲ್ಲಿ 1,600 ಮೆಟ್ರಿಕ್ ಟನ್ ತಾಳೆ ಎಣ್ಣೆ ಬಂದಿದೆ. ಆ ಎಣ್ಣೆಯನ್ನು ಮಂಗಳೂರು ಬಂದರ್‌ನಿಂದ ಪಡೆದು ಈಗ ರಾಜ್ಯಾದ್ಯಂತ ವಿತರಣೆ ಮಾಡಬೇಕೆನ್ನುವ ಕಾರ್ಯ ನಡೆಯುತ್ತಿದೆ. ಮಾನ್ಯ ವಿರೋಧ ಪಕ್ಷದ ಉಪ-ನಾಯಕರು ವಿಷಯಗಳನ್ನು ತಿಳಿದು ಆರೋಪ ಮಾಡಿದರೆ ನನ್ನ ಅಭ್ಯಂತರವಿಲ್ಲ, ಎಲ್ಲಾ ವಿಷಯವನ್ನು ಅರ್ಥ ಮಾಡಿಕೊಳ್ಳದೆ ಟೀಕೆ ಮಾಡತಕ್ಕಂಥದ್ದರಲ್ಲಿ ವಿರೋಧಪಕ್ಷದವರು ವಿಫಲರಾಗಿದ್ದರೆಂದು ಇದರಿಂದ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಡೀಸಲ್‌ದು ಹೇಳಿಸ್ವಾಮಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ : 1990ನೇ ನವೆಂಬರ್‌ನಲ್ಲಿ 78,225 ಮೆಟ್ರಿಕ್ ಟನ್ ಡೀಸಲ್ ಬರುತ್ತಿತ್ತು. ಡಿಸೆಂಬರ್ ತಿಂಗಳಿನಲ್ಲಿ 87,264 ಮೆಟ್ರಿಕ್ ಟನ್ ಬರುತ್ತಿತ್ತು. ಜನವರಿಯಲ್ಲಿ 92,347 ಮೆಟ್ರಿಕ್ ಟನ್, ಫೆಬ್ರವರಿ ತಿಂಗಳಿನಲ್ಲಿ 88,396 ಮೆಟ್ರಿಕ್ ಟನ್ ಬರುತ್ತಿತ್ತು. ಈಗ, ಮಾರ್ಚ್ ತಿಂಗಳಿನಲ್ಲಿ, 96,998 ಮೆಟ್ರಿಕ್ ಟನ್ ಎಷ್ಟು ನಮಗೆ ಬಂದಿದೆ. ಡೀಸಲ್‌ನ್ನು ಜಾಸ್ತಿ ಮಾಡಿಕೊಂಡೇ ಹೋಗಲಾಗಿದೆ. ಕಡಿಮೆಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಿಗುತ್ತಾ ಇಲ್ಲ, ಎಲ್ಲೂ ಡೀಸೆಲ್ ಸಿಗುತ್ತಾ ಇಲ್ಲ, ಕಾಳಸಂತೆಯಲ್ಲಿ ಮಾತ್ರ ಸಿಗುತ್ತಿದೆ. ನೀವು ಎಷ್ಟೇ ಹೆಚ್ಚಿಗೆ ಮಾಡಿದರೂ ಡೀಸಲ್ ಸಿಗುತ್ತಾ ಇಲ್ಲ, ಅದು ಕಾಳಸಂತೆಯಲ್ಲಿ ಮಾರಾಟ ಆಗುತ್ತಿದೆ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ನಾನು ಮಾನ್ಯ ವಿರೋಧಪಕ್ಷದ ಮುಖಂಡರುಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಅವರನ್ನು ನಾನು ಈ ಸದನದಿಂದ ಕರೆದುಕೊಂಡು ಹೋಗುತ್ತೇನೆ. ಎಲ್ಲಾದರೂ ಡೀಸಲ್ ಇದೆಯೆಂದು ಹೇಳುವುದಾದರೆ ಅದನ್ನು ನಾನು ಸರಿಪಡಿಸುತ್ತೇನೆ, ಹೋಗೋಣ ನಡೆಯಿರಿ.

ಅಧ್ಯಕ್ಷರು : ಎಲ್ಲರನ್ನೂ ಕರೆದುಕೊಂಡು ಹೋಗಿ, ಅವರೂ ಬರುತ್ತಿದ್ದಾರೆ. ನೀವು ಅವರ ಜೊತೆಯಲ್ಲಿ ಹೋಗಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೋಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಆರ್.ಎನ್. ನಾಯಕ್ .....

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ನಾನು 155ನೇ ಪ್ರಶ್ನೆಯನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಟಿ.ಎನ್. ನರಸಿಂಹಮೂರ್ತಿ : ವಿಷಯವನ್ನು ತಿಳಿದುಕೊಳ್ಳದೇ ಮಾತನಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅವಕಾಶ ಕೊಡಿ, ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು : ಇದೂ ಬಹಳ ಮುಖ್ಯವಾದ ಪ್ರಶ್ನೆ .... ಅರ್ಧ ಗಂಟೆ ಚರ್ಚೆಗೆ ಕಾಲಾವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ಬಿ. ಈಶ್ವರಪ್ಪ : ಮಂತ್ರಿಗಳು ಗ್ಯಾಸ್ ಸಿಲಿಂಡರ್ ಇದೆ ಎಂದು .....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಯಾರು ಇದರ ಬಗ್ಗೆ ಶಾಮೀಲಾಗಿದ್ದಾರೆ ಎಂದು ಹೇಳುತ್ತೇನೆ.

ಅಧ್ಯಕ್ಷರು: ಬರೆದುಕೊಡಿ.

Sri T.N. Narasimhamurthy: I will take action.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲ್ಲಿ ಡೀಸಲ್ ಇದೆ? ಸಾವಿರಾರು ಲಾರಿಗಳು ಕ್ಯೂ ನಿಂತಿವೆ. ರೈತರಿಗೆ ತೊಂದರೆ ಆಗಿದೆ. ರೈತರು ಬಹಳ ಕಷ್ಟ ಪಡುತ್ತಿದ್ದಾರೆ.

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್ : ಡೀಸೆಲ್‌ನ ಕಾಳಸಂತೆ ಮಾರಾಟದ ಬಗ್ಗೆ ಪತ್ರಿಕೆಗಳಲ್ಲಿ ವಿವರಗಳು ಪ್ರಕಟ ಆಗಿದೆ. ಪತ್ರಿಕಾ ವಿವರಗಳನ್ನು ತಾವು ನೋಡಿದ್ದೀರಿ.

(ಗೊಂದಲ)

ಶ್ರೀ ಕೆ.ಬಿ. ಈಶ್ವರಪ್ಪ : ಸೀಮೆ ಎಣ್ಣೆ ಹೊರಗಡೆ ಸಿಗುತ್ತಾ ಇಲ್ಲ, ಸಾಮಾನ್ಯ ಜನಕ್ಕೆ ಸೀಮೆ ಎಣ್ಣೆಸಿಗುತ್ತಾ ಇಲ್ಲ, ಡೀಸೆಲ್‌ಗೆ ಸೀಮೆ ಎಣ್ಣೆ ಮಿಕ್ಸ್ ಆಗುತ್ತಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಪ್ರತ್ಯೇಕವಾಗಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಅರ್ಧ ಗಂಟೆ ಡಿಸ್ಕಷನ್‌ಗೆ ಅವಕಾಶ ಮಾಡಿಕೊಡುತ್ತೇನೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯ ಒತ್ತುವರಿ

155 - ಶ್ರೀ ಆರ್.ಎನ್. ನಾಯಕ (ಭಟ್ಕಳ) ! ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅರಣ್ಯ ಭೂಮಿ ಒತ್ತುವರಿ ಮಾಡಿರುವವರ ಒಟ್ಟು ಸಂಖ್ಯೆ ಎಷ್ಟು?

ಆ) ಆ ಪೈಕಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಒತ್ತುವರಿ ಮಾಡಿರುವವರ ಸಂಖ್ಯೆ ಎಷ್ಟು (ಈ ಬಗ್ಗೆ ಈ ಜಿಲ್ಲೆಯಲ್ಲಿನ ತಾಲ್ಲೂಕುವಾರು ವಿವರ ನೀಡುವುದು)

ಇ) ಭೂ ಸಂರಕ್ಷಣಾ ಶಾಸನ (ಫಾರೆಸ್ಟ್ ಕನ್ಸರ್‌ವೇಷನ್ ಆಕ್ಟ್) ಜಾರಿಗೆ ಬಂದನಂತರ ಒತ್ತುವರಿ ಮಾಡಿರುವಂಥ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದವರಿಗೆ ಕಳುಹಿಸಿಕೊಟ್ಟಿರುವುದು ನಿಜವೆ. ಹಾಗಿದ್ದಲ್ಲಿ ಅಂಥವರುಗಳ ಸಂಖ್ಯೆ ಎಷ್ಟು?